Akashvani: Bangalore
National Bulletin In Kannada
25.10.2025 : 7.35AM
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

25.10.2025 : 7.35AM
*******

**ಮುಖ್ಯಾಂಶಗಳು**

1. ಬಿಹಾರ ವಿಧಾನಸಭಾ ಚುನಾವಣೆ: ಪ್ರಚಾರದಲ್ಲಿ ಕೃತಕ ಬುದ್ಧಿಮತ್ತೆ - ಸಂಶ್ಲೇಷಿತ ವಿಷಯ ಬಳಕೆಗೆ ಚುನಾವಣಾ ಆಯೋಗದಿಂದ ಹೊಸ ಮಾರ್ಗಸೂಚಿ
2. ಇಂದಿನಿಂದ ನಾಲ್ಕು ದಿನ ದೇಶಾದ್ಯಂತ ಛತ್ ಪೂಜೆ; ಹಬ್ಬಕ್ಕೆ ಸಂಬಂಧಿಸಿದ ಹಾಡುಗಳನ್ನು ಹಂಚಿಕೊಳ್ಳುವಂತೆ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಕರೆ
3. ಕೇಂದ್ರ ಸರ್ಕಾರಿ ನೌಕರರಿಗೆ ಎನ್ಪಿಎಸ್ ೭೫ ಮತ್ತು ಬಿಎನ್‌ಪಿಎಸ್ ಹೂಡಿಕೆ ಆಯ್ಕೆಗಳನ್ನು ವಿಸ್ತರಿಸಲು ಅನುಮೋದನೆ
4. ಸಿಡ್ನಿಯಲ್ಲಿ ಇಂದು ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಮೂರನೇ ಏಕದಿನ ಕ್ರಿಕೆಟ್ ಪಂದ್ಯ

**********

ಬಿಹಾರ ವಿಧಾನಸಭಾ ಚುನಾವಣೆಗೆ ಮುನ್ನ ರಾಜಕೀಯ ಪ್ರಚಾರದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಸಂಶ್ಲೇಷಿತ ವಿಷಯವನ್ನು ಬಹಿರಂಗಪಡಿಸಲು ಮತ್ತು ಜವಾಬ್ದಾರಿಯುತವಾಗಿ ಬಳಸಲು ಕಠಿಣ ನಿಯಮಗಳನ್ನು ವಿವರಿಸುವ ಹೊಸ ಸಲಹೆಯನ್ನು ಭಾರತೀಯ ಚುನಾವಣಾ ಆಯೋಗ ಹೊರಡಿಸಿದೆ.ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಪ್ರಚಾರ ಪ್ರತಿನಿಧಿಗಳು ಪ್ರಚಾರ ಉದ್ದೇಶಗಳಿಗಾಗಿ ಬಳಸಿದ ಅಥವಾ ಪ್ರಸಾರ ಮಾಡುವ ಯಾವುದೇ ಕೃತಕ ಬುದ್ಧಿಮತ್ತೆಯಿಂದ ರಚಿಸಲಾದ ಅಥವಾ ಕೃತಕ ಬುದ್ಧಿಮತ್ತೆ-ಮಾರ್ಪಡಿಸಿದ ಚಿತ್ರ, ಆಡಿಯೋ ಅಥವಾ ವಿಡಿಯೊವನ್ನು ಕೃತಕ ಬುದ್ಧಿಮತ್ತೆ- ಉತ್ಪತ್ತಿ, ಡಿಜಿಟಲ್ ವರ್ಧಿತ ಅಥವಾ ಸಂಶ್ಲೇಷಿತ ವಿಷಯ ಎಂದು ಲೇಬಲ್ ಮಾಡಲು ಆಯೋಗವು ಸೂಚಿಸಿದೆ.ಎಲ್ಲಾ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಪ್ರಚಾರ ಪ್ರತಿನಿಧಿಗಳು ಚುನಾವಣಾ ಪ್ರಚಾರಕ್ಕಾಗಿ ಬಳಸುವ ಯಾವುದೇ ಕೃತಕ ಬುದ್ಧಿಮತ್ತೆ-ರಚಿಸಿದ ಅಥವಾ ಡಿಜಿಟಲ್ ಬದಲಾದ ಚಿತ್ರಗಳು, ವಿಡಿಯೊಗಳು ಅಥವಾ ಆಡಿಯೊಗಳು ಗೋಚರ ಪ್ರದರ್ಶನ ಪ್ರದೇಶದ ಕನಿಷ್ಠ ಶೇಕಡ ೧೦ ರಷ್ಟು ಮತ್ತು ಆಡಿಯೊ ವಿಷಯದಲ್ಲಿ ಸ್ಪಷ್ಟ ಮತ್ತು ಪ್ರಮುಖ ಲೇಬಲ್ ಅನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಆಯೋಗವು ನಿರ್ದೇಶಿಸಿದೆ.

**********

ಚುನಾವಣಾ ಆಯೋಗವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಪ್ರತಿ ಮತಗಟ್ಟೆಯು ಮತದಾನದ ದಿನದಂದು ಭರವಸೆಯ ಕನಿಷ್ಠ ಸೌಲಭ್ಯಗಳು ಮತ್ತು ಮತದಾರರ ಸಹಾಯವನ್ನು ಹೊಂದಿದೆಯೆ ಎಂದು ಖಚಿತಪಡಿಸಿಕೊಳ್ಳಲು ನಿರ್ದೇಶನಗಳನ್ನು ನೀಡಿದೆ. ಬಿಹಾರದಲ್ಲಿ ಮುಂದಿನ ತಿಂಗಳ ೬ ಮತ್ತು ೧೧ ರಂದು ವಿಧಾನಸಭಾ ಚುನಾವಣೆ ನಡೆಯಲಿದ್ದು, ಏಳು ರಾಜ್ಯಗಳ ಉಪಚುನಾವಣೆ ನವೆಂಬರ್ ೧೧ ರಂದು ನಡೆಯಲಿದೆ.ಕುಡಿಯುವ ನೀರು, ಕಾಯುವ ಶೆಡ್, ನೀರಿನ ಸೌಲಭ್ಯದೊಂದಿಗೆ ಶೌಚಾಲಯ, ಸಾಕಷ್ಟು ಬೆಳಕು, ವಿಕಲಚೇತನರಿಗೆ ಸರಿಯಾದ ಇಳಿಜಾರು ರಾಂಪ್, ಪ್ರಮಾಣಿತ ಮತದಾನ ವಿಭಾಗ ಮತ್ತು ಸರಿಯಾದ ಸೂಚನಾ ಫಲಕಗಳು ಭರವಸೆಯ ಕನಿಷ್ಠ ಸೌಲಭ್ಯಗಳಾಗಿವೆ.

**********

ನಾಲ್ಕು ದಿನಗಳ ಛತ್ ಪೂಜಾ ಆಚರಣೆಗಳು ಇಂದು ದೇಶದ ವಿವಿಧ ಭಾಗಗಳಲ್ಲಿ ಪ್ರಾರಂಭವಾಗಲಿವೆ. ಸೂರ್ಯ ದೇವರು ಮತ್ತು ಅವರ ಸಹೋದರಿ ಛಥಿ ಮಾಯ ಅವರ ಆರಾಧನೆಗೆ ಸಮರ್ಪಿತವಾದ ಈ ಹಬ್ಬವು ಪರಿಶುದ್ಧತೆ, ಕೃತಜ್ಞತೆ ಮತ್ತು ಒಬ್ಬರ ಕುಟುಂಬದ ಯೋಗಕ್ಷೇಮವನ್ನು ಒತ್ತಿಹೇಳುತ್ತದೆ.

**********

ಹಬ್ಬಕ್ಕೆ ಸಂಬಂಧಿಸಿದ ಹಾಡುಗಳನ್ನು ಹಂಚಿಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಜನರಿಗೆ ಕರೆ ನೀಡಿದ್ದಾರೆ. ಮುಂದಿನ ಕೆಲವು ದಿನಗಳಲ್ಲಿ ಅವುಗಳನ್ನು ಮರುಪೋಸ್ಟ್ ಮಾಡುವುದಾಗಿ ಅವರು ಹೇಳಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಮಾತನಾಡಿರುವ ಪ್ರಧಾನಿ, ಬಿಹಾರ ಮತ್ತು ದೇಶಾದ್ಯಂತದ ಭಕ್ತರು ಈಗಾಗಲೇ ಭಕ್ತಿಯಿಂದ ಸಿದ್ಧತೆಯಲ್ಲಿ ತೊಡಗಿದ್ದಾರೆ ಎಂದು ಹೇಳಿದ್ದಾರೆ.

**********

ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಆಕಾಶವಾಣಿಯ ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೨೭ನೇ ಸಂಚಿಕೆಯಾಗಲಿದೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಕಾರ್ಯಕ್ರಮ ಬಿತ್ತರಗೊಳ್ಳಲಿದೆ. ಅಲ್ಲದೆ ಎಐಆರ್ ನ್ಯೂಸ್, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲಿ ನೇರ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲೂ ಆಕಾಶವಾಣಿ ಈ ಕಾರ್ಯಕ್ರಮವನ್ನು ಪ್ರಸಾರ ಮಾಡಲಿದೆ.

**********

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ - ಎನ್‌ಪಿಎಸ್ ಮತ್ತು ಏಕೀಕೃತ ಪಿಂಚಣಿ ಯೋಜನೆ - ಯುಪಿಎಸ್ ಎರಡರ ಅಡಿಯಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಎಲ್ಸಿ ೭೫ ಮತ್ತು ಬಿಎಲ್ಸಿ ಹೂಡಿಕೆ ಆಯ್ಕೆಗಳನ್ನು ವಿಸ್ತರಿಸಲು ಸರ್ಕಾರ ಅನುಮೋದನೆ ನೀಡಿದೆ. ಇದು ಸರ್ಕಾರೇತರ ಚಂದಾದಾರರಿಗೆ ಲಭ್ಯವಿರುವ ವಿಶಾಲ ಶ್ರೇಣಿಯ ಹೂಡಿಕೆ ಆಯ್ಕೆಗಳಿಗಾಗಿ ಕೇಂದ್ರ ಸರ್ಕಾರಿ ನೌಕರರ ನಿರಂತರ ಬೇಡಿಕೆಗೆ ಅನುಗುಣವಾಗಿದೆ. ನಿವೃತ್ತಿ ಯೋಜನೆಯಲ್ಲಿ ನಮ್ಯತೆಯನ್ನು ಹೆಚ್ಚಿಸಲು ಮತ್ತು ವೈಯಕ್ತಿಕ ಆದ್ಯತೆಗಳಿಗೆ ಅನುಗುಣವಾಗಿ ಉದ್ಯೋಗಿಗಳು ತಮ್ಮ ನಿವೃತ್ತಿ ಕಾರ್ಪಸ್ ಅನ್ನು ನಿರ್ವಹಿಸಲು ಅನುವು ಮಾಡಿಕೊಡಲು ಈ ಆಯ್ಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ಎನ್‌ಪಿಎಸ್ ಮತ್ತು ಯುಪಿಎಸ್ ಅಡಿಯಲ್ಲಿ, ಕೇಂದ್ರ ಸರ್ಕಾರಿ ನೌಕರರು ಈಗ ಡೀಫಾಲ್ಟ್ ಆಯ್ಕೆಯಂತಹ ಹೂಡಿಕೆ ಆಯ್ಕೆಗಳ ಶ್ರೇಣಿಯನ್ನು ಆಯ್ಕೆ ಮಾಡಬಹುದು. ಈ ನಿರ್ಧಾರವು ಹೆಚ್ಚಿನ ನಮ್ಯತೆ ಮತ್ತು ಆಯ್ಕೆ, ಗ್ಲೈಡ್ ಪಥ ಕಾರ್ಯವಿಧಾನ, ವಿಶಾಲವಾದ ಸ್ವಯಂ ಆಯ್ಕೆ ಆಯ್ಕೆಗಳು ಮತ್ತು ಮಾಹಿತಿಯುಕ್ತ ಯೋಜನೆಗೆ ಬೆಂಬಲದಂತಹ ಪ್ರಮುಖ ಪ್ರಯೋಜನಗಳನ್ನು ಒದಗಿಸಲಿದೆ.

**********

ಭಾರತೀಯ ಸಾಂಖ್ಯಿಕ ಸಂಸ್ಥೆ ಮಸೂದೆ, ೨೦೨೫ ರ ಕರಡು ಕುರಿತು ಪ್ರತಿಕ್ರಿಯೆಗಳು ಅಥವಾ ಸಲಹೆಗಳನ್ನು ಸಲ್ಲಿಸುವ ಅವಧಿಯನ್ನು ವಿಸ್ತರಿಸುವುದಾಗಿ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಘೋಷಿಸಿದೆ. ಸಾರ್ವಜನಿಕರು, ಮುಂದಿನ ತಿಂಗಳ ೩ ರವರೆಗೆ ಕರಡು ಕುರಿತು ತಮ್ಮ ಅಭಿಪ್ರಾಯಗಳನ್ನು ಸಚಿವಾಲಯಕ್ಕೆ ಕಳುಹಿಸಬಹುದು.
ಪ್ರತಿಕ್ರಿಯೆಗಳನ್ನು ಸಲ್ಲಿಸಲು ಕರಡು ಮಸೂದೆಯು ಸಚಿವಾಲಯದ ವೆಬ್ ಸೈಟ್ ನಲ್ಲಿ ಲಭ್ಯವಿದೆ. ಸಲಹೆಗಳನ್ನು capisi-mospi@gov.in ಗೆ ಇಮೇಲ್ ಮೂಲಕ ಕಳುಹಿಸಬಹುದು.

**********

ಪೋಷನ್ ಮತ್ತು ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ - ಪಿಎಂಎಂವಿವೈಗಾಗಿ ಟೋಲ್-ಫ್ರೀ ಸಹಾಯವಾಣಿ ಸಂಖ್ಯೆಯಲ್ಲಿ ಬದಲಾವಣೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಪ್ರಕಟಿಸಿದೆ. ನೂತನ ಸಹಾಯವಾಣಿ ಸಂಖ್ಯೆ ೧೫೧೫ ನವೆಂಬರ್ ೧ ರಿಂದ ಕಾರ್ಯನಿರ್ವಹಿಸಲಿದ್ದು, ಅಸ್ತಿತ್ವದಲ್ಲಿರುವ ಸಂಖ್ಯೆ ೧೪೪೦೮ ಅನ್ನು ಬದಲಾಯಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ಪೋಷನ್ ಮತ್ತು ಪಿಎಂಎಂವಿವೈ ಯೋಜನೆಗಳ ಅಡಿಯಲ್ಲಿ ಸಹಾಯವನ್ನು ಬಯಸುವ ಫಲಾನುಭವಿಗಳಿಗೆ ಮರುಪಡೆಯುವಿಕೆಯನ್ನು ಸರಳಗೊಳಿಸಲು ಮತ್ತು ಪ್ರವೇಶವನ್ನು ಸುಧಾರಿಸಲು ಈ ಬದಲಾವಣೆಯನ್ನು ಪರಿಚಯಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

**********

ರಾಷ್ಟ್ರ ರಾಜಧಾನಿಯಲ್ಲಿ ವಾಯುಮಾಲಿನ್ಯವನ್ನು ತಡೆಗಟ್ಟಲು ದೆಹಲಿ ಸರ್ಕಾರ  ಇದೇ ೨೮ ಮತ್ತು ೩೦ ರ ನಡುವೆ ಕ್ಲೌಡ್ ಸೀಡಿಂಗ್ ಮೂಲಕ ತನ್ನ ಮೊದಲ ಕೃತಕ ಮಳೆಯನ್ನು ನಡೆಸಲಿದೆ. ಇದು ವಾಯುಮಾಲಿನ್ಯದ ವಿರುದ್ಧದ ರಾಜಧಾನಿಯ ಹೋರಾಟದಲ್ಲಿ ಮಹತ್ವದ ತಾಂತ್ರಿಕ ಮೈಲಿಗಲ್ಲಾಗಿದೆ. ಕ್ಲೌಡ್ ಸೀಡಿಂಗ್ ಮೂಲಕ ಕೃತಕ ಮಳೆಯನ್ನು ಪ್ರೇರೇಪಿಸಲು ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಹೇಳಿದ್ದಾರೆ. ದೆಹಲಿ ಪರಿಸರ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ ಮಾತನಾಡಿ, ವಿಮಾನದಿಂದ ಹಿಡಿದು ಹವಾಮಾನ ಮತ್ತು ಪರಿಸರ ಮೇಲ್ವಿಚಾರಣೆಯವರೆಗೆ ಎಲ್ಲಾ ವ್ಯವಸ್ಥೆಗಳು ಈ ಉದ್ದೇಶಕ್ಕಾಗಿ ಜಾರಿಯಲ್ಲಿವೆ ಎಂದಿದ್ದಾರೆ.

**********

ಅಕ್ಟೋಬರ್ ೧೭ಕ್ಕೆ ಕೊನೆಗೊಂಡ ವಾರದಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು ೪.೫ ಶತಕೋಟಿ ಡಾಲರ್ ನಿಂದ ೭೦೨ ಶತಕೋಟಿಗೆ ಏರಿಕೆಯಾಗಿದೆ. ದೇಶದ ವಿದೇಶಿ ವಿನಿಮಯ ಮೀಸಲುಗಳ ಭಾಗವಾಗಿ ಭಾರತೀಯ  ರಿಸರ್ವ್ ಬ್ಯಾಂಕ್ ಹೊಂದಿರುವ ಚಿನ್ನದ ಸಂಗ್ರಹವು ಮೊದಲ ಬಾರಿಗೆ ೬.೨ ಶತಲಕ್ಷ ಡಾಲರ್ ಗಳಷ್ಟು ಏರಿಕೆಯಾಗಿ ೧೦೮.೫ ಶತಕೋಟಿ ಡಾಲರ್ ದಾಟಿದೆ. ಮೀಸಲುಗಳ ಅತಿದೊಡ್ಡ ಅಂಶವಾಗಿರುವ ವಿದೇಶಿ ಕರೆನ್ಸಿ ಸ್ವತ್ತುಗಳು ವಾರದಲ್ಲಿ ೧.೭ ಶತಕೋಟಿ ಡಾಲರ್ ಗಳಿಂದ ೫೭೦ ಶತಕೋಟಿ ಡಾಲರ್ ಗಳಿಗೆ ಇಳಿದಿದೆ. ಇದು ಯುರೋ, ಪೌಂಡ್ ಮತ್ತು ಯೆನ್ ನಂತಹ ಕರೆನ್ಸಿಗಳಲ್ಲಿನ ಏರಿಳಿತಗಳಿಂದ ಪ್ರಭಾವಿತವಾಗಿದೆ. ಇದೇ ಅವಧಿಯಲ್ಲಿ ಅಂತಾರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಮೀಸಲು ಸ್ಥಾನವು ೩೦ ದಶಲಕ್ಷ ಡಾಲರ್ ನಿಂದ ೪.೬೨ ಶತಕೋಟಿ ಡಾಲರ್‌ಗೆ ಇಳಿದಿದೆ.

**********

ಭಾರತೀಯ ಕರಾವಳಿ ಕಾವಲು ಪಡೆ  ಎರಡು ಸುಧಾರಿತ ವೇಗದ ಗಸ್ತು ಹಡಗುಗಳಾದ ಐಸಿಜಿ ಹಡಗು ಅಜಿತ್ ಮತ್ತು ಐಸಿಜಿ ಹಡಗು ಅಪರಾಜಿತ್ ಅನ್ನು ನಿನ್ನೆ ಗೋವಾ ಶಿಪ್ ಯಾರ್ಡ್ ಲಿಮಿಟೆಡ್ ನಲ್ಲಿ ಅನಾವರಣಗೊಳಿಸಿದೆ. ೫೨ ಮೀಟರ್ ಉದ್ದದ ಹೊಸ ಹಡಗುಗಳು ದೇಶೀಯವಾಗಿ ನಿರ್ಮಿಸಲಾದ ೮ ವೇಗದ ಗಸ್ತು ಹಡಗುಗಳ ಸರಣಿಯಲ್ಲಿ ಏಳನೇ ಮತ್ತು ಎಂಟನೆಯದಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸುಮಾರು ೩೨೦ ಟನ್ ತೂಕವಿರುವ ಈ ಹಡಗುಗಳು ನಿಯಂತ್ರಕ ಪಿಚ್ ಪ್ರೊಪೆಲ್ಲರ್ ಗಳನ್ನು ಹೊಂದಿರುವುದರಿಂದ ಉತ್ತಮ ಕುಶಲತೆ ಮತ್ತು ಪ್ರೊಪಲ್ಷನ್ ದಕ್ಷತೆಯನ್ನು ಹೊಂದಿವೆ. ಇದು ಭಾರತದಲ್ಲಿ ಈ ವರ್ಗದ ಹಡಗುಗಳಲ್ಲಿ ಮೊದಲನೆಯದಾಗಿದೆ. ಮೀನುಗಾರಿಕೆ ರಕ್ಷಣೆ, ಕರಾವಳಿ ಗಸ್ತು, ಕಳ್ಳಸಾಗಣೆ ವಿರೋಧಿ, ಕಡಲ್ಗಳ್ಳತನ ವಿರೋಧಿ ಮತ್ತು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಸೇರಿದಂತೆ ಬಹು-ಅಭಿಯಾನದ ಪಾತ್ರಗಳನ್ನು ನಿರ್ವಹಿಸಲು ಇವು ನೆರವಾಗಲಿವೆ.

**********

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಅಂತಿಮ ಪಂದ್ಯ ಇಂದು ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಬೆಳಗ್ಗೆ ೯ ಗಂಟೆಗೆ ಆರಂಭವಾಗಲಿದೆ. ಅಡಿಲೇಡ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ೨ ವಿಕೆಟ್‌ಗಳಿಂದ ಪರಾಭಗೊಂಡಿರುವ ಭಾರತ, ಸರಣಿಯಲ್ಲಿ ೦-೨ರಲ್ಲಿ ಹಿನ್ನಡೆ ಅನುಭವಿಸಿದೆ. ಈ ಮಧ್ಯೆ, ಮಹಿಳೆಯರ ಏಕದಿನ ವಿಶ್ವಕಪ್‌ನಲ್ಲಿ ಕಳೆದ ರಾತ್ರಿ ನಡೆಯಬೇಕಿದ್ದ ಶ್ರೀಲಂಕಾ ಮತ್ತು ಪಾಕಿಸ್ತಾನ ನಡುವಿನ ಪಂದ್ಯ ಮಳೆಯಿಂದಾಗಿ ರದ್ದಾಗಿದೆ. ಹೀಗಾಗಿ ಉಭಯ ತಂಡಗಳು ತಲಾ ೧ ಅಂಕ ಹಂಚಿಕೊಂಡು ಅಭಿಯಾನ ಮುಗಿಸಿವೆ. ಇಂದು ಇಂದೋರ್‌ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳು ಸೆಣಸಲಿವೆ.

**********

ರಾಂಚಿಯಲ್ಲಿ ನಿನ್ನೆ ಆರಂಭವಾದ ೪ನೇ ದಕ್ಷಿಣ ಏಷ್ಯನ್ ಅಥ್ಲೆಟಿಕ್ಸ್ ಒಕ್ಕೂಟದ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್‌ನಲ್ಲಿ ಮೂರು ಚಿನ್ನದ ಪದಕ ಜಯಿಸಿದೆ. ಮೊರಾಬದಿಯಲ್ಲಿರುವ ಬಿರ್ಸಾ ಮುಂಡಾ ಫುಟ್ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಪುರುಷರ ೫ ಸಾವಿರ ಮೀ. ರೇಸ್ ಸ್ಪರ್ಧೆಯಲ್ಲಿ ಭಾರತದ ಪ್ರಿನ್ಸ್ ಕುಮಾರ್ ೧೪: ೨೨.೧೭ ಸೆಕೆಂಡ್ ಗಳಲ್ಲಿ ಗುರಿ ಮುಟ್ಟಿ ಮೊದಲ ಚಿನ್ನದ ಪದಕ ಗೆದ್ದುಕೊಟ್ಟರು.

*****END*****